**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 1681/2018**

| | | |
|---|---|---|
| ಸಾಕ್ಷಿದಾರರ ಹೆಸರು | ರವಿ ಕುಮಾರ ಎಂ | ಫ್ರಾಸಾಃ 3 |
| ತಂದೆಯ/ಗಂಡನ ಹೆಸರು | ಮುದ್ದುಮಾದಪ್ಪ | ಚಾಸಾಃ 7 |
| ವಯಸ್ಸು | 44 ವರ್ಷ | |
| ಕೆಲಸ | ಪೊಲೀಸ್ ಇನ್ಸ್ಪೆಕ್ಟರ್, ಮಳವಳ್ಳಿ ನಗರ ಪೊಲೀಸ್ ಠಾಣೆ | ಸಾ ಪ್ರ ಬೋ |
| ವಾಸ | ಮಳವಳ್ಳಿ | ದಿಃ 23.06.2025 |

**ಮುಖ್ಯ ವಿಚಾರಣೆ ಫ್ರಾಜ್ಞ ಸ.ಸ.ಅ ರವರಿಂದಃ**

ನಾನು ದಿಃ 02.02.2018 ರಿಂದ ದಿಃ 22.02.2019 ರ ವರೆಗೆ ಕವಲಂದೆ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 20.08.2018 ರಂದು ಪ್ರಕರಣದ ಕಡತವನ್ನು ಚಾಸಾ 6 ರವರಿಂದ ಪಡೆದು ಪರಿಶಿಲೀಸಿ ಅದೇ ದಿನ ಕೃತ್ಯ ನಡೆದ ಸ್ಥಳದ ಆರ್.ಟಿ.ಸಿ ಯನ್ನು ಕೋರಿ ಕವಲಂದೇ ಉಪ ತಹಸೀಲ್ದಾರ್ ರವರಿಗೆ ಮನವಿ ಮಾಡಿರುತ್ತೇನೆ. ದಿಃ 21.08.2018 ರಂದು ಉಪ ತಹಸೀಲ್ದಾರ್ ರವರಿಂದ ಆರ್.ಟಿ.ಸಿಯನ್ನು ಪಡೆದಿರುತ್ತೇನೆ. ನಂತರ ಈ ಪ್ರಕರಣದಲ್ಲಿ ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿಯ ವಿರುದ್ಧ ಮಾನ್ಯ ಘನ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿ ಕೃತ್ಯ ನಡೆದ ಸ್ಥಳದ ಆರ್.ಟಿ.ಸಿ ಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ 3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ. 3(ಎ) ಎಂದು ಗುರುತಿಸಲಾಯಿತು.

**ಸಿ.ಸಿಃ 1681/2018**

**ಫ್ರಾಸಾಃ 3 ಚಾಸಾಃ 7**

**ಪಾಟೀ ಸವಾಲುಃ ಶ್ರೀಮತಿ ಎಂ.ಎಸ್.ಪಿ ವಕೀಲರಿಂದಃ**

ನಾನು ಕೃತ್ಯ ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ. ತನಿಖೆಯಲ್ಲಿ ಕೃತ್ಯ ಸ್ಥಳದ ಸರ್ವೆ ನಂ. 02/1 ಎಂದು ತಿಳಿದು ಬಂದಿರುತ್ತದೆ. ನಿ.ಪಿ. 3 ಅನ್ನು ನಾನು ಉಪ ತಹಸೀಲ್ದಾರ್ ರವರಿಂದ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಸುಳ್ಳು ದೋಷಾರೋಪಣ ಪಟ್ಟಿಯನ್ನು ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

**1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ,**
**ನಂಜನಗೂಡು**